ಬಾಟಲಿಯನ್ನು ಗಬಕ್ಕನೆ ಕೈಗೆತ್ತಿಕೊಳ್ಳಬೇಕು ಎನ್ನುವಷ್ಟರಲ್ಲಿ ಒಬ್ಬ ಪೊಲೀಸ್ ಪ್ರತ್ಯಕ್ಷನಾದ. ಕೋಲನ್ನು ಬೆಂಚಿಗೆ ಬಡಿಯುತ್ತಾ, 'ಏನೋ ಅದು?' ಎಂದ. 'ಯಾರೋ ಮರೆತುಹೋಗವ್ರೆ ಸ್ವಾಮಿ' ಎಂದ ಭಿಕ್ಷುಕ. 'ಕೊಡೋ ಇಲ್ಲಿ' ಎಂದು ಅದನ್ನು ಎತ್ತಿಕೊಂಡ ಪೊಲೀಸ್ ಶಿಳ್ಳೆ ಹೊಡೆಯುತ್ತಾ ಮುಂದೆ ಹೋದ. ರಾತ್ರಿ ಹೆಂಡತಿ ಮಕ್ಕಳ ಜೊತೆ ಕೂತು ಒಂದೊಂದು ಲೋಟ ಕುಡಿಯಬೇಕು ಅಂದುಕೊಳ್ಳುತ್ತಾ ಒಸರುತ್ತಿದ್ದ ಜೊಲ್ಲನ್ನು ಒಳಗೆಳೆದುಕೊಳ್ಳುತ್ತಾ ಪೊಲೀಸ್‌ಸ್ಟೇಷನ್ ಕಡೆಗೆ ಹೆಜ್ಜೆ ಹಾಕಿದ.

ಸ್ಟೇಷನ್‌ನಲ್ಲಿ ಇನ್‌ಸ್ಪೆಕ್ಟರ್ ಅವನನ್ನು ನೋಡುತ್ತಿದ್ದಂತೆಯೇ,

'ಕಾಫಿ ಎಲ್ಲಯ್ಯ? ಆಗ್ಲೆ ಆರು ಗಂಟೆ ಆಯ್ತು' ಎಂದ.

'ಈಗ ತಂದೆ ಸಾರ್.'

'ಅದೇನು ಕೈಯಲ್ಲಿ ಬಾಟಲು?'

'ಮ್ಯಾಂಗೊ ಜ್ಯೂಸ್ ಸಾರ್.'

'ಅದನ್ನೇ ತಾ ಇಲ್ಲಿ...'

ಲೋಟಕ್ಕೆ ಬಗ್ಗಿಸಿಕೊಳ್ಳಬೇಕು ಎನ್ನುವಷ್ಟರಲ್ಲಿ ಸ್ಟೇಷನ್ ಮುಂದೆ ಜೀಪ್ ನಿಂತ ಶಬ್ದ.

'ಸಾರ್ ಜೀಪ್ ನಿಂತ ಶಬ್ದ.'

'ಸಾರ್ ದೊಡ್ಡ ಸಾಹೇಬ್ರು!'

ಇನ್‌ಸ್ಪೆಕ್ಟರ್ ಥಟ್ಟನೆ ಎದ್ದು, ಮುಂಬಾಗಿಲಿಗೆ ಧಾವಿಸಿ ಸೆಲ್ಯೂಟ್ ಹೊಡೆದ. ಎಸಿಪಿ ಸಾಹೇಬ್ರು, 'ಏನ್ರೀ ಎಲ್ಲ ಸರಿಯಾಗಿದೆಯಾ? ನಾಡಿದ್ದು ಪಿಎಂ ವಿಸಿಟ್ ಇದೆ. ಬಂದೋಬಸ್ತ್ ಪಕ್ಕಾ ಇರಬೇಕು' ಎಂದರು.

'ಆಯ್ತು ಸಾರ್!' ಎಂದು ಮತ್ತೆ ಸೆಲ್ಯೂಟ್ ಹೊಡೆದ.

'ಇದೇನ್ರಿ ಇದು?'

'ಮ್ಯಾಂಗೊ ಜ್ಯೂಸ್ ಸಾರ್. ತಗೊಳ್ಳಿ ಸಾರ್...'

ಎಸಿಪಿ ಬಾಟಲು ಹಿಡಿದುಕೊಂಡು ಮತ್ತೆ ಜೀಪ್ ಏರಿದರು.

'ಏನಾದ್ರೂ ಪ್ರಾಬ್ಲಂ ಆದ್ರೆ ಕೂಡ್ಲೆ ಮೆಸೇಜ್ ಕೊಡಿ' ಎನ್ನುತ್ತಾ ಡ್ರೈವರ್‌ಗೆ, 'ನಡಿ' ಎಂದರು. ಜೀಪ್ ನೇರವಾಗಿ ಕಮಿಷನರ್ ಕಚೇರಿಗೆ ಹೋಯಿತು. ಸುರಕ್ಷತೆಯ ಬಂದೋಬಸ್ತ್ ವಿವರಣೆ ಕೊಡುತ್ತಿರುವಾಗ ಇದ್ದಕ್ಕಿದ್ದಂತೆಯೇ ಗೃಹಮಂತ್ರಿಗಳ ಸರ್‌ಪ್ರೈಸ್ ವಿಸಿಟ್.

'ಏನ್ರೀ ಹ್ಯಾಗಿದೆ ಬಂದೋಬಸ್ತ್? ಪಿಎಂ ವಿಸಿಟ್‌ಗೆ ಯಾರೋ ಕಪ್ಪುಬಾವುಟ ತೋರಿಸಬೇಕು ಅಂತಿದಾರಂತಲ್ಲ? ನಿಮ್ಮ ಗುಪ್ತಚರ ಮಾಹಿತಿ ಏನೆನ್ನುತ್ತೆ?'

'ಆಗ್಩ೇ ನೂರು ಜನ ಅರೆಸ್ಟ್ ಮಾಡಿ ಒಳಗೆ ಹಾಕಿದೀವಿ ಸಾರ್. ಏನೂ ಪ್ರಾಬ್ಲಂ ಇರೋದಿಲ್ಲ...'

'ತುಂಬ ಹುಷಾರ್ ರೀ. ನಮ್ಮ ರಾಜ್ಯಕ್ಕೆ ಕೆಟ್ಟ ಹೆಸರು ಬರಬಾರದು ನೋಡಿ.'

'ಓಕೆ ಸಾರ್' ಎನ್ನುತ್ತಾ ಮಾವಿನಹಣ್ಣಿನ ರಸದ ಬಾಟಲಿಯನ್ನು ಗೃಹಮಂತ್ರಿಗಳ ಕಾರ್ಯದರ್ಶಿಗಳ ಕೈಗೆ ಕೊಟ್ಟರು ಪೊಲೀಸ್ ಕಮಿಷನರ್.

ಗೃಹಮಂತ್ರಿಗಳು ಮನೆಗೆ ಹೋದಾಗ ಕಾರ್ಯದರ್ಶಿ ಹಿಂದೆಯೇ ಹೋಗಿ ಬಾಟಲಿಯನ್ನು ಊಟದ ಮೇಜಿನ ಮೇಲಿಟ್ಟು ನಮಸ್ಕಾರ ಮಾಡಿ ಹೋದ. ಗೃಹಮಂತ್ರಿಗಳ ಪತ್ನಿ ಬಾಟಲಿಯನ್ನು ಅನುಮಾನದಿಂದ ನೋಡಿದರು.

'ಜ್ಯೂಸ್ ಬಾಟಲಿ ಕಣೆ ಅದು. ಎರಡು ಗ್ಲಾಸ್ ತಗೊಂಡು ಬಾ, ಕುಡಿಯೋಣ.'